# ಕಂಡಿದ್ದೀರಾ ಥಡ್ ಥಡಿ ಹೂವಾ?



ಆ ದಿನ ಮಹಾರಾಷ್ಟ್ರದ ಲೇಣಿಯಾಂದ್ರಿಯ ಗಿರಿಜಾತ್ಮಕ ದೇವಾಲಯ ವೀಕ್ಷಿಸಲು ಹೋಗಿದ್ದೆ. ಅಲ್ಲಿ ನನಗೆ ಆಕರ್ಷಕವಾಗಿ ಕಂಡಿದ್ದೇ ಈ ಹೂವು.

ದೂರದಿಂದ ಗಮನಿಸಿದಾಗ ನಮ್ಮಲ್ಲಿನ ಸೇವಂತಿಗೆಯೋ ಚೆಂಡು ಹೂವೋ ಇರಬಹುದೇನೋ ಅಂದುಕೊಂಡಿದ್ದೆ. ಆದರೆ ಸಮೀಪ ಹೋಗಿ ಹೂವನ್ನು ಸೂಕ್ಷ್ಮವಾಗಿ ನೋಡಿದಾಗ ನಾನಂದುಕೊಂಡ ಹೂವು ಅದಾಗಿರಲಿಲ್ಲ, ಅರೇ! ಇದ್ಯಾವ ಸೀಮೆಯ ಹೂವಾಗಿರಬಹುದು ಎಂದುಕೊಳ್ಳುತ್ತಲೇ ಆ ಸುಂದರ ಹೂ ಮಾಲೆಯನ್ನು ನನ್ನ ಕ್ಯಾಮೆರಾದಲ್ಲಿ ಬಂಧಿಸಿದೆ.

ಊರಿಗೆ ಮರಳಿದ ಮೇಲೆ ಕಂಡಕಂಡವರಲ್ಲಿ ಆ ಹೂವಿನ ಚಿತ್ರ ತೋರಿಸಿದರೆ ಯಾರಿಗೂ ಅದರ ಪರಿಚಯವಿಲ್ಲ! ತೋಟಗಾರಿಕೆಯ ಅಧಿಕಾರಿ ಒಬ್ಬರಲ್ಲಿ ವಿಚಾರಿಸಿದಾಗ ಅಲ್ಪ ಮಾಹಿತಿ ಲಭಿಸಿತು. ಅದು ಆಸ್ಟರೇಸಿ ಎಂಬ ಕುಟುಂಬಕ್ಕೆ ಸೇರಿದ ಹೂವಾಗಿದ್ದು, ಆಸ್ಟ್ರೇಲಿಯಾವೇ ತವರು ಮನೆಯಾಗಿದೆ. 'ಹೆಲಿಕ್ರಿಸಂ ಬ್ರಾಕ್ಟಿಯೇಟ್' ಎಂಬುದು ಈ ಹೂವಿನ ಸಸ್ಯ ಶಾಸ್ತ್ರೀಯ ಹೆಸರು. ಮಹಾರಾಷ್ಟ್ರದಲ್ಲಿ ಇದನ್ನು ಥಡ್ ಥಡಿ ಅಂತ ಕರೆಯುತ್ತಾರೆ. ಬೂದಿ ಹಸಿರು ಎಲೆಯನ್ನು ಹೊಂದಿರುವ ಈ ಹೂವಿನ ಗಿಡವು ಸುಮಾರು ಮೂರು ಮೀಟರ್ ಎತ್ತರದವರೆಗೂ ಬೆಳೆಯಬಲ್ಲದು.

ಈ ಹೂವಿನಲ್ಲಿ ಬಂಗಾರದ ಬಣ್ಣ, ಕೆಂಪು, ಬಿಳಿ, ಹಳದಿ ಬಣ್ಣಗಳದ್ದು ಇವೆ. ಚಳಿಗಾಲದ ಸಮಯದಲ್ಲಿ ಈ ಹೂವನ್ನು ಕಾಣಲು ಸಾಧ್ಯ. ಇದು ನಿತ್ಯ ಹರಿದ್ವರ್ಣ ಕಾಡಿನಿಂದ ಹಿಡಿದು ಮರಳುಗಾಡಿನ ಪ್ರದೇಶದಲ್ಲಿಯೂ ಬೆಳೆಯಬಲ್ಲದು.

1850ರಲ್ಲಿ ಜರ್ಮನಿಯಲ್ಲಿ ಮೊದಲ ಬಾರಿ ಈ ಹೂವಿನ ಬೇಸಾಯ ಮಾಡಲಾಯಿತು. ಆ ನಂತರ ಉದ್ಯಾನಗಳಲ್ಲಿ ಈ ಹೂವಿಗೆ ಖಾಯಂ ಸ್ಥಾನ ನೀಡಲಾಯಿತು. ಕುಂಡಗಳಲ್ಲಿ ಸಹಾ ಬೆಳೆಯಬಹುದಾದ ಈ ಸುಂದರ ಹೂವಿನಲ್ಲಿ ಗಿಡ್ಡ ತಳಿಗಳಿವೆ. ಅಲ್ಲದೆ, ಈ ತಳಿಯ ಒಣಗಿದ ಹೂಗಳು ಮೂರು ವರ್ಷಗಳವರೆಗೂ ತಮ್ಮ ಆಕಾರ, ಬಣ್ಣವನ್ನು ಕಳೆದುಕೊಳ್ಳದೆ ಇರುವುದೇ ಇದರ ವೈಶಿಷ್ಟ್ಯ.

■ ಗಣಪತಿ ಹಾಸ್ಪುರ


ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL

ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟ್ರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.

ಅರೆಕಾ ಟೀ ಒಂದು ಉತ್ತಮ ಆಯ್ಕೆ




ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್,
ನಿಂಬೆ ಮತ್ತು ತುಳಸಿ

WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon bigbasket Flipkart
www.arecatea.in ನಲ್ಲೂ ಲಭ್ಯ